## ಕರ್ನಾಟಕ ಸರ್ಕಾರ

**ವಿಶೇಷ ನೇಮಕಾತಿ ಸಮಿತಿ**
ಮುಖ್ಯ ಇಂಜಿನಿಯರ್ ರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ,
ಬೆಂಗಳೂರು–560 009.

ಸಂ: ಮುಇಂ/ಪಂರಾಇಂಇ/ಬೆಂ/ಸಿ–8/19/ಸಇಂ–ನೇ.ನೇಮ/2015–16/1509 ದಿನಾಂಕ: 23.06.2015

## <u>ಅಧಿಸೂಚನೆ</u>

ವಿಷಯ: ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಖಾಲಿ ಇರುವ ಸಹಾಯಕ ಇಂಜಿನಿಯರ್ (ಸಿವಿಲ್) ಹುದ್ದೆಗಳಿಗೆ ನೇಮಕಾತಿ ಮಾಡುವ ಬಗ್ಗೆ – ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆಪಟ್ಟಿ

ಉಲ್ಲೇಖ: 1) ಸರ್ಕಾರದ ಅಧಿಸೂಚನೆ ಸಂ. ಗ್ರಾಅಪ/177/ಸೇಶಿಕಾ/2014 ದಿನಾಂಕ 1.12.2014
2) ಸರ್ಕಾರದ ಅಧಿಸೂಚನೆ ಸಂ. ಗ್ರಾಅಪ/30/ಸೇಶಿಕಾ/201(1) ದಿನಾಂಕ 13.02.2015
3) ಈ ಕಛೇರಿ ಅಧಿಸೂಚನೆ ಸಂ. ಮುಇಂ/ಪಂರಾಇಂಇ/ಬೆಂ/ಸಿ–8/ಸಇಂ.ನೇ ನೇಮ/2014–15/11156 ದಿನಾಂಕ 25.02.2015

–*–

ಕರ್ನಾಟಕ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ (ಸಹಾಯಕ ಇಂಜಿನಿಯರ್ ಮತ್ತು ಕಿರಿಯ ಇಂಜಿನಿಯರ್ ವೃಂದಗಳಿಗೆ ನೇಮಕಾತಿ) (ವಿಶೇಷ) ನಿಯಮಗಳು 2014 ಹಾಗೂ ಸದರಿ ನಿಯಮಕ್ಕೆ ತಂದಿರುವ (ವಿಶೇಷ)(ತಿದ್ದುಪಡಿ) 2015ರಂತೆ ಈ ಇಲಾಖೆಯಲ್ಲಿ ಖಾಲಿ ಇರುವ 207 ಗ್ರೂಪ್–ಬಿ ದರ್ಜೆಯ ರೂ.22800-600-24600- 700-28800-800- 33600-900-39000- 1050-43200 ವೇತನ ಶ್ರೇಣಿಯಲ್ಲಿ ಸಹಾಯಕ ಇಂಜಿನಿಯರ್ (ಸಿವಿಲ್) ಹುದ್ದೆಗಳಿಗೆ ಭರ್ತಿ ಮಾಡುವ ಸಲುವಾಗಿ ಉಲ್ಲೇಖ(3)ರ ದಿನಾಂಕ 25.02.2015ರ ಅಧಿಸೂಚನೆಯಲ್ಲಿ ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳಿಂದ ಕೆಳಕಂಡಂತೆ ಆನ್–ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿತ್ತು.

| ಕ್ರ.ಸಂ. | ಹುದ್ದೆಗಳ ವಿವರ | ಒಟ್ಟು ಹುದ್ದೆಗಳ ಸಂಖ್ಯೆ |
|---|---|---|
| 1 | ಸಹಾಯಕ ಇಂಜಿನಿಯರ್(ಸಿವಿಲ್) | 140 |
| 2 | ಸಹಾಯಕ ಇಂಜಿನಿಯರ್(ಸಿವಿಲ್) (ಹೈದ್ರಾಬಾದ್–ಕರ್ನಾಟಕ ಪ್ರದೇಶದ ಸ್ಥಳೀಯ ಅಭ್ಯರ್ಥಿಗಳಿಗೆ ಮೀಸಲಿರಿಸಿರುವ ಹುದ್ದೆಗಳು) | 67 |
| | **ಒಟ್ಟು** | **207** |

ಮೇಲ್ಕಂಡ (ವಿಶೇಷ) ನಿಯಮಗಳು 2014ರ ನಿಯಮ–6 ಉಪನಿಯಮ(2)ರಲ್ಲಿ ತಿಳಿಸಿರುವಂತೆ ಸಹಾಯಕ ಇಂಜಿನಿಯರ್ ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯ ಎಲ್ಲಾ ವರ್ಷಗಳ/ಸೆಮಿಸ್ಟರ್‌ಗಳ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿರುವ ಒಟ್ಟು ಸರಾಸರಿ ಶೇಕಡಾವಾರು ಅಂಕಗಳ ಆಧಾರದ ಮೇಲೆ ಜೇಷ್ಠತೆಯನುಸಾರ

ಹುದ್ದೆಗಳ ಸಂಖ್ಯೆಗೆ ಸೀಮಿತವಾಗಿ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳಿಗೆ ಒಳಪಟ್ಟು ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಮೂಲ ದಾಖಲೆಗಳನ್ನು ಆಯ್ಕೆ ಸಲುವಾಗಿ ಪರಿಶೀಲಿಸಲಾಗಿರುತ್ತದೆ.

ಮೇಲೆ ತಿಳಿಸಿರುವ (ವಿಶೇಷ) ನಿಯಮಗಳು 2014ರ ನಿಯಮ–6 ಉಪನಿಯಮ(1), (2), (3) ಹಾಗೂ (4)ರಂತೆ ಮೀಸಲಾತಿ ಪ್ರವರ್ಗವಾರು ರೋಸ್ಟರ್ ಮತ್ತು ಮೆರಿಟ್ ಆಧಾರಿತ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಎಲ್ಲಾ ಪ್ರವರ್ಗಗಳಲ್ಲಿ ಅಭ್ಯರ್ಥಿಗಳು ಗಳಿಸಿರುವ ಸರಾಸರಿ ಶೇಕಡಾವಾರು ಅಂಕಗಳ ಮೆರಿಟ್ (ಸಂದರ್ಭಾನುಸಾರ ಗ್ರೇಡಿಂಗ್ ಪದ್ಧತಿ ಅನುಸರಿಸಿದ್ದಲ್ಲಿ ತತ್ಸಮಾನ ಶೇಕಡಾವಾರು ಅಂಕಗಳ) ಆಧಾರದ ಮೇಲೆ ತಯಾರಿಸಿ ತಾತ್ಕಾಲಿಕ ಮುಖ್ಯ ಆಯ್ಕೆ ಪಟ್ಟಿ (Provisional Main Selection List) ಹಾಗೂ (ಸದರಿ ತಾತ್ಕಾಲಿಕ ಮುಖ್ಯ ಆಯ್ಕೆ ಪಟ್ಟಿಯಲ್ಲಿ ಪ್ರಕಟಿಸಿರುವ ಅಭ್ಯರ್ಥಿಗಳನ್ನು ಹೊರತುಪಡಿಸಿ) ಮೀಸಲಾತಿ ಪ್ರವರ್ಗಗಳಡಿಯಲ್ಲಿ ಅಧಿಸೂಚಿಸಿರುವ ಹುದ್ದೆಗಳ ಸಂಖ್ಯೆಯ ಶೇಕಡಾ 25ರಷ್ಟು ಅಭ್ಯರ್ಥಿಗಳ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು (Additional Selection List) (ಮೊದಲ ರೋಸ್ಟರ್ ಬಿಂದುವಿನಿಂದ ಪ್ರಾರಂಭಿಸಿ) ತಯಾರಿಸಿ ಕೆಳಕಂಡಂತೆ ಅಭ್ಯರ್ಥಿಗಳಿಗೆ/ಸಾರ್ವಜನಿಕರಿಗೆ ಲಭ್ಯವಾಗುವಂತೆ ಅಧಿಕೃತ ಕರ್ನಾಟಕ ರಾಜ್ಯ ಪತ್ರ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಮುಖ್ಯ ಇಂಜಿನಿಯರ್ ಕಛೇರಿಯ ಸೂಚನಾ ಫಲಕ ಹಾಗೂ ಇಲಾಖೆಯ ಅಧಿಕೃತ ವೆಬ್‌ಸೈಟ್ http://rdpr.ka.nic.in ರಲ್ಲಿ ಸದರಿ ಅಧಿಸೂಚನೆಯ ಜೊತೆ ಕೆಳಕಂಡ ನಮೂನೆಗಳಲ್ಲಿ ಲಗತ್ತಿಸಿ ಪ್ರಕಟಿಸಲಾಗಿದೆ.

| | ಕ್ರ.ಸಂ. | ಹುದ್ದೆಗಳ ವಿವರ | ಪ್ರಕಟಿಸಿರುವ ಅನುಬಂಧಗಳು (Annexures) |
|---|---|---|---|
| I (Non-HKR) | 1 | ಸಹಾಯಕ ಇಂಜಿನಿಯರ್ (ಸಿವಿಲ್) – 140 ಹುದ್ದೆಗಳಿಗೆ ಮೀಸಲಾತಿ ಪ್ರವರ್ಗವಾರು / ರೋಸ್ಟರ್ ಬಿಂದುವಿನ ಅನುಸಾರದ ಅಭ್ಯರ್ಥಿಗಳ ತಾತ್ಕಾಲಿಕ ಮುಖ್ಯ ಆಯ್ಕೆ ಪಟ್ಟಿ (Reservation Catgegorywise Provisional Main Selection List of Assistant Engineer (Civil)) | ಅನುಬಂಧ–1ರಲ್ಲಿ (Annexure-1) |
| | 2 | ಸಹಾಯಕ ಇಂಜಿನಿಯರ್ (ಸಿವಿಲ್) – 140 ಹುದ್ದೆಗಳಿಗೆ ಪ್ರವರ್ಗವಾರು ಆಯ್ಕೆಯಾಗಿರುವ ಅಭ್ಯರ್ಥಿಗಳನ್ನು ಕ್ರೋಢೀಕರಿಸಿ ತಯಾರಿಸಿರುವ ಮೆರಿಟ್ ಆಧಾರಿತ ಅಭ್ಯರ್ಥಿಗಳ ತಾತ್ಕಾಲಿಕ ಮುಖ್ಯ ಆಯ್ಕೆ ಪಟ್ಟಿ (Merit based Provisional Main Selection List of Assistant Engineer- Civil) | ಅನುಬಂಧ–2ರಲ್ಲಿ (Annexure-2) |
| | 3 | ಅಧಿಸೂಚಿಸಿರುವ ಹುದ್ದೆಗಳ ಸಂಖ್ಯೆಯ ಶೇಕಡಾ 25ರಷ್ಟು (ತಾತ್ಕಾಲಿಕ ಮುಖ್ಯ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳನ್ನು ಹೊರತುಪಡಿಸಿ) ಮೀಸಲಾತಿ ಪ್ರವರ್ಗವಾರು ರೋಸ್ಟರ್ ಬಿಂದುವಿನ ಅನುಸಾರದ ಅಭ್ಯರ್ಥಿಗಳ ಹೆಚ್ಚುವರಿ ಆಯ್ಕೆ ಪಟ್ಟಿ (Reservation Catgegorywise 25% Additional Selection List of Assistant Engineer-Civil) | ಅನುಬಂಧ–3ರಲ್ಲಿ (Annexure-3) |
| | 4 | ಪ್ರವರ್ಗವಾರು ಆಯ್ಕೆ ಮಾಡಿರುವ ಶೇಕಡಾ 25ರಷ್ಟು ಅಭ್ಯರ್ಥಿಗಳನ್ನು ಕ್ರೋಢೀಕರಿಸಿ ತಯಾರಿಸಿರುವ ಮೆರಿಟ್ ಆಧಾರಿತ ಅಭ್ಯರ್ಥಿಗಳ ಹೆಚ್ಚುವರಿ ಆಯ್ಕೆ ಪಟ್ಟಿ (25% Merit based Additional Selection List of Assistant Engineer -Civil) | ಅನುಬಂಧ–4ರಲ್ಲಿ (Annexure-4) |

| | | | |
|---|---|---|---|
| II (HKR) | 1 | ಸಹಾಯಕ ಇಂಜಿನಿಯರ್ (ಸಿವಿಲ್) – 65 ಹುದ್ದೆಗಳಿಗೆ (ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ಅಭ್ಯರ್ಥಿಗಳಿಗೆ ಮೀಸಲಿರಿಸಿರುವ ಹುದ್ದೆಗಳು) ಮೀಸಲಾತಿ ಪ್ರವರ್ಗವಾರು / ರೋಸ್ಟರ್ ಬಿಂದುವಿನ ಅನುಸಾರದ ಅಭ್ಯರ್ಥಿಗಳ ತಾತ್ಕಾಲಿಕ ಮುಖ್ಯ ಆಯ್ಕೆ ಪಟ್ಟಿ (Reservation Catgegorywise Provisional Main Selection List of Assistant Engineer -Civil) | ಅನುಬಂಧ–5ರಲ್ಲಿ (Annexure-5) |
| | 2 | ಸಹಾಯಕ ಇಂಜಿನಿಯರ್ (ಸಿವಿಲ್) – 65 ಹುದ್ದೆಗಳಿಗೆ (ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ಅಭ್ಯರ್ಥಿಗಳಿಗೆ ಮೀಸಲಿರಿಸಿರುವ ಹುದ್ದೆಗಳು) ಮೀಸಲಾತಿ ಪ್ರವರ್ಗವಾರು ಆಯ್ಕೆಯಾಗಿರುವ ಅಭ್ಯರ್ಥಿಗಳನ್ನು ಕ್ರೋಢೀಕರಿಸಿ ತಯಾರಿಸಿರುವ ಮೆರಿಟ್ ಆಧಾರಿತ ಅಭ್ಯರ್ಥಿಗಳ ತಾತ್ಕಾಲಿಕ ಮುಖ್ಯ ಆಯ್ಕೆ ಪಟ್ಟಿ ವಿವರಗಳು (Merit based Provisional Main Selection List of Assistant Engineer -Civil) | ಅನುಬಂಧ–6ರಲ್ಲಿ (Annexure-6) |
| | 3 | ಅಧಿಸೂಚಿಸಿರುವ ಹುದ್ದೆಗಳ ಸಂಖ್ಯೆಯ ಶೇಕಡಾ 25ರಷ್ಟು (ತಾತ್ಕಾಲಿಕ ಮುಖ್ಯ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳನ್ನು ಹೊರತುಪಡಿಸಿ) ಮೀಸಲಾತಿ ಪ್ರವರ್ಗವಾರು ರೋಸ್ಟರ್ ಬಿಂದುವಿನ ಅನುಸಾರದ ಅಭ್ಯರ್ಥಿಗಳ ಹೆಚ್ಚುವರಿ ಆಯ್ಕೆ ಪಟ್ಟಿ (Reservation Catgegorywise 25% Additional Selection List of Assistant Engineer-Civil) | ಅನುಬಂಧ–7ರಲ್ಲಿ (Annexure-7) |
| | 4 | ಪ್ರವರ್ಗವಾರು ಆಯ್ಕೆ ಮಾಡಿರುವ ಶೇಕಡಾ 25ರಷ್ಟು ಅಭ್ಯರ್ಥಿಗಳನ್ನು ಕ್ರೋಢೀಕರಿಸಿ ತಯಾರಿಸಿರುವ ಮೆರಿಟ್ ಆಧಾರಿತ ಅಭ್ಯರ್ಥಿಗಳ ಹೆಚ್ಚುವರಿ ಆಯ್ಕೆ ಪಟ್ಟಿ (25% Merit based Additional Selection List of Assistant Engineer -Civil) | ಅನುಬಂಧ–8ರಲ್ಲಿ (Annexure-8) |

ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದ್ದ ಸಹಾಯಕ ಇಂಜಿನಿಯರ್–67 ಹುದ್ದೆಗಳಲ್ಲಿ ಪ.ಜಾತಿ (SC) ಪ್ರವರ್ಗದ ಅಂಗವಿಕಲ (HI/LD or CP) – 1 ಹುದ್ದೆ ಮತ್ತು 2ಎ (2A) ಪ್ರವರ್ಗದ ಅಂಗವಿಕಲ (HI/LD or CP) – 1 ಹುದ್ದೆ ಸೇರಿದಂತೆ ಒಟ್ಟು 2 ಹುದ್ದೆಗಳಿಗೆ ಅರ್ಹ ಅಂಗವಿಕಲ ಗುಂಪಿನ ಅಭ್ಯರ್ಥಿಗಳು ಲಭ್ಯವಿಲ್ಲದ ಕಾರಣ ಈ ಪ್ರವರ್ಗಗಳ ಅಂಗವಿಕಲ ಗುಂಪಿನ ಬ್ಯಾಕ್‌ಲಾಗ್ ಹುದ್ದೆಗಳೆಂದು ಪರಿಗಣಿಸಿ ಮುಂದೆ ನೇಮಕಾತಿ ಮಾಡುವ ಸಂದರ್ಭದಲ್ಲಿ ತುಂಬಲು ವಿಶೇಷ ನೇಮಕಾತಿ ಸಮಿತಿ ತೀರ್ಮಾನಿಸಿರುತ್ತದೆ.

ಮೇಲ್ಕಂಡಂತೆ ಸಹಾಯಕ ಇಂಜಿನಿಯರ್ ಹುದ್ದೆಗಳಿಗೆ ಭರ್ತಿ ಮಾಡುವ ಸಲುವಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಹುದ್ದೆಗಳ ವರ್ಗವಾರು ಪ್ರಕಾರ ಪ್ರಕಟಿಸಿರುವ ತಾತ್ಕಾಲಿಕ ಆಯ್ಕೆ ಪಟ್ಟಿಯಿಂದ ಬಾಧಿತರಾಗಬಹುದಾದ(Aggrieved) ಅಭ್ಯರ್ಥಿಗಳು ಯಾವುದೇ ಆಕ್ಷೇಪಣೆ/ಮನವಿಗಳಿದ್ದಲ್ಲಿ ಸಮರ್ಥಿಸುವಂತಹ ದಾಖಲೆಗಳೊಂದಿಗೆ ಈ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗೆ ಅಧ್ಯಕ್ಷರು, ವಿಶೇಷ ನೇಮಕಾತಿ ಸಮಿತಿ ಹಾಗೂ ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ, ಬೆಂಗಳೂರು–560 009 ಇವರಿಗೆ ಸಲ್ಲಿಸಬಹುದು. ನಿಗದಿತ ಅವಧಿ ಮುಗಿದ ನಂತರ ಯಾವುದೇ ಮನವಿ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಈ ಅಧಿಸೂಚನೆಯ ಜೊತೆಗೆ ಲಗತ್ತಿಸಿ ಪ್ರಕಟಿಸಿರುವ ತಾತ್ಕಾಲಿಕ ಮುಖ್ಯ ಆಯ್ಕೆ ಪಟ್ಟಿ ಹಾಗೂ ಹೆಚ್ಚುವರಿ ಆಯ್ಕೆ ಪಟ್ಟಿಯಲ್ಲಿ ಅಭ್ಯರ್ಥಿಗಳ ಹೆಸರು ಸೇರ್ಪಡೆಯಾದ ಮಾತ್ರಕ್ಕೆ ಯಾವುದೇ ಹಕ್ಕು ಪ್ರಧಾನವಾಗತಕ್ಕದ್ದಲ್ಲ ಎಂದು ಅಭ್ಯರ್ಥಿಗಳು ತಿಳಿಯತಕ್ಕದ್ದು.

ಅಧ್ಯಕ್ಷರು,
ವಿಶೇಷ ನೇಮಕಾತಿ ಸಮಿತಿ ಹಾಗೂ ಮುಖ್ಯ ಇಂಜಿನಿಯರ್,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಬೆಂಗಳೂರು.

ಸದಸ್ಯರು, ವಿಶೇಷ ನೇಮಕಾತಿ ಸಮಿತಿ ಹಾಗೂ
ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ
ಬೆಂಗಳೂರು

ಸದಸ್ಯರು, ವಿಶೇಷ ನೇಮಕಾತಿ ಸಮಿತಿ ಹಾಗೂ
ಆಯುಕ್ತರು, ಹಿಂದುಳಿದ ವರ್ಗಗಳು ಮತ್ತು
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
ಬೆಂಗಳೂರು

ಸದಸ್ಯರು, ವಿಶೇಷ ನೇಮಕಾತಿ ಸಮಿತಿ ಹಾಗೂ
ನಿರ್ದೇಶಕರು, ವಿಕಲ ಚೇತನ ಮತ್ತು
ಹಿರಿಯ ನಾಗರೀಕರ ಸಬಲೀಕರಣ ಇಲಾಖೆ,
ಬೆಂಗಳೂರು

ಸದಸ್ಯರು, ವಿಶೇಷ ನೇಮಕಾತಿ ಸಮಿತಿ ಹಾಗೂ
ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು

ಸದಸ್ಯ ಕಾರ್ಯದರ್ಶಿ,
ವಿಶೇಷ ನೇಮಕಾತಿ ಸಮಿತಿ ಹಾಗೂ ಅಧೀಕ್ಷಕ ಇಂಜಿನಿಯರ್,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಬೆಂಗಳೂರು.